# ಅಖಿಲ ಭಾರತ ಜನ ವಿಜ್ಞಾನ ಸಂಘಟನೆಗಳ ಜಾಲದ (AIPSN) ಹೇಳಿಕೆ

## ಸಾರ್ವಜನಿಕರಿಗೆ ವೈಜ್ಞಾನಿಕ ಪ್ರಕಟಣೆಗಳ ಮುಕ್ತ ಲಭ್ಯತೆಯನ್ನು ನಿರಾಕರಿಸುವ ಏಕಸ್ವಾಮ್ಯ ಪ್ರಕಾಶನಗಳ ಪ್ರಯತ್ನಗಳನ್ನು ತಡೆಯಿರಿ

ಎಲ್ಸೆವಿಯರ್ ಲಿಮಿಟೆಡ್, ವೈಲಿ ಇಂಡಿಯಾ ಪ್ರೈ. ಲಿಮಿಟೆಡ್ ಮತ್ತು ಅಮೇರಿಕನ್ ಕೆಮಿಕಲ್ ಸೊಸೈಟಿ - ಈ ಮೂರು ಪ್ರಮುಖ ಪ್ರಕಾಶನಗಳು, ಸೈ-ಹಬ್ (Sci-hub) ಮತ್ತು ಲಿಬ್-ಜೆನ್ (lib-gen) ಗಳ ಲಭ್ಯತೆಯನ್ನು ಭಾರತದಲ್ಲಿ ಕ್ರಿಯಾತ್ಮಕವಾಗಿ, ಸಂಪೂರ್ಣವಾಗಿ ನಿರ್ಬಂಧಿಸುವಂತೆ ಕೋರಿ ದೆಹಲಿ ಹೈಕೋರ್ಟ್‌ನಲ್ಲಿ ಅರ್ಜಿ ಸಲ್ಲಿಸಿವೆ. ಜಗತ್ತಿನಾದ್ಯಂತ ಪ್ರಕಟವಾಗುವಂತಹ ಸಂಶೋಧನಾ ಲೇಖನಗಳನ್ನು ಮುಕ್ತವಾಗಿ ತನ್ನ ಜಾಲತಾಣದ ಮೂಲಕ ಒದಗಿಸುವುದರಲ್ಲಿ ಸೈ-ಹಬ್ ಅಗ್ರಗಣ್ಯ. ಅದೇ ರೀತಿ, ಜಗತ್ತಿನಾದ್ಯಂತ ಪ್ರಕಟವಾಗುವಂತಹ ಪುಸ್ತಕಗಳನ್ನು ಲಿಬ್-ಜೆನ್ ತಾಣ ಮುಕ್ತವಾಗಿ ಒದಗಿಸುತ್ತಿದೆ. ಆದ್ದರಿಂದ, ಈ ಲೇಖನಗಳು ಮತ್ತು ಪುಸ್ತಕಗಳು ಖರ್ಚು ತಗಲದೆ ಭಾರತೀಯ ವಿಜ್ಞಾನಿಗಳಿಗೆ, ಶಿಕ್ಷಕರಿಗೆ ಹಾಗು ವಿದ್ಯಾರ್ಥಿಗಳಿಗೆ ಡೌನ್‌ಲೋಡ್ ಮಾಡಲು ಸಿಗುತ್ತವೆ.

ಎಲ್ಸೆವಿಯರ್, ವೈಲಿ ಮತ್ತು ಅಮೇರಿಕನ್ ಕೆಮಿಕಲ್ ಸೊಸೈಟಿ ಈ ಮೊಕದ್ದಮೆಯನ್ನು ಏಕೆ ಸಲ್ಲಿಸುತ್ತಿವೆ? ವೈಜ್ಞಾನಿಕ ಲೇಖನಗಳ ಪ್ರಕಟಣೆ ಹೆಚ್ಚಿನ ಲಾಭಾಂಶವನ್ನು ಒದಗಿಸುವಂತಹ ಹತ್ತುಬಿಲಿಯ ಹತ್ತುಡಾಲರ್ ಗಳಷ್ಟು ಮೌಲ್ಯದ ಉದ್ಯಮವಾಗಿದೆ. ವೈಜ್ಞಾನಿಕ ಲೇಖನಗಳ ಪ್ರಕಾಶನದ ಲಾಭಾಂಶವು 40%, ಅಂದರೆ, ಗೂಗಲ್‌ನ ಲಾಭಾಂಶಕ್ಕಿಂತ ಸುಮಾರು ಎರಡು ಪಟ್ಟು ಹೆಚ್ಚಾಗಿದೆ! ಈ ಮೊಕದ್ದಮೆಯನ್ನು ದಾಖಲಿಸಿದ ಮೂರು ಪ್ರಕಾಶನಗಳು ಜಗತ್ತಿನ ಸುಮಾರು 40% ವೈಜ್ಞಾನಿಕ ಲೇಖನಗಳನ್ನು ಪ್ರಕಟಿಸುವುದಲ್ಲದೆ, ವಿಶ್ವದಾದ್ಯಂತ ವಿಜ್ಞಾನ ಮತ್ತು ಸಾಮಾಜಿಕ ವಿಜ್ಞಾನಗಳ 50% ಕ್ಕೂ ಹೆಚ್ಚು ಪ್ರಕಟಣೆಗಳನ್ನು ನಿಯಂತ್ರಿಸುವುವು.

ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆಯ ಅನುಸಾರ, ಜ್ಞಾನ ಪಡೆಯುವುದು ಮಾನವರ ಮೂಲಭೂತ ಹಕ್ಕು ಎಂದು ಸ್ವೀಕರಿಸಲಾಗಿದೆ. ಆದರೆ ವಾಸ್ತವದಲ್ಲಿ, ಏಕಸ್ವಾಮ್ಯ ಪ್ರಕಾಶನಗಳ ಗುಂಪು, ಅತಿ ಹೆಚ್ಚು ದರಗಳ ಮೂಲಕ ಈ ಹಕ್ಕನ್ನು ನಿರಾಕರಿಸಿದಂತಾಗಿದೆ. ಆದರೆ ಪ್ರಕಾಶನಗಳು ಬೃಹತ್ ಲಾಭ ಗಳಿಸುವುವು. ಸಂಶೋಧನೆಯನ್ನು ಮಾಡಿ ಲೇಖನಗಳನ್ನು ಬರೆಯುವುದು ವಿಜ್ಞಾನಿಗಳು, ವಿದ್ವಾಂಸರು. ಅದಲ್ಲದೆ, ಲೇಖನಗಳನ್ನು ಪರಿಶೀಲಿಸಿ ಅವುಗಳ ಗುಣಮಟ್ಟವನ್ನು ಎತ್ತಿಹಿಡಿಯುವುದು, ಹಾಗೂ ಸಂಪಾದಕೀಯ ಮಂಡಳಿಯಲ್ಲಿ ಭಾಗವಹಿಸಿ ಪ್ರಕಟಣೆಯ ಕಾರ್ಯ ಈಡೇರಿಸುವುದನ್ನು ವಿಜ್ಞಾನಿಗಳೇ ತಮ್ಮ ಸಮಯ, ಸೇವೆಗಳನ್ನು ಮುಕ್ತವಾಗಿ ನೀಡಿ ನಿರ್ವಹಿಸುತ್ತಾರೆ. ಆದ್ದರಿಂದ, ಲೇಖನಗಳ ಬರವಣಿಗೆ, ಪರಿಶೀಲನೆ ಹಾಗೂ ಸಂಚಿಕೆಗಳ ಸಂಪಾದಕೀಯ ಕಾರ್ಯದಲ್ಲಿ ಪ್ರಕಾಶನದ ಯಾವ ಸಿಬ್ಬಂದಿಗಳ ಪಾತ್ರವಿರುವುದಿಲ್ಲ. ಆದರೂ ವಿಜ್ಞಾನಿಗಳ ಈ ಮಾನಸಿಕ ಮತ್ತು ದೈಹಿಕ ಶ್ರಮದ ಫಲ ಪ್ರಕಾಶನಗಳಿಗೆ ಲಭಿಸುತ್ತದೆ. ವಿಪರ್ಯಾಸವೆಂದರೆ, ಪ್ರಕಟವಾಗಿರುವ ಲೇಖನವನ್ನು ಬರೆದ ವಿಜ್ಞಾನಿಯು ಸ್ವತಃ ತನ್ನ ಲೇಖನವನ್ನು ಡೌನ್ ಲೋಡ್ ಮಾಡಬೇಕಿದ್ದರೆ ಕೂಡ ಕ್ರಯ ಪಾವತಿ ಮಾಡಬೇಕಾಗುತ್ತದೆ. ಇಂದು ಇದು ವೈಜ್ಞಾನಿಕ ಪ್ರಕಾಶನದ ವ್ಯವಹಾರ ಮಾದರಿಯಾಗಿದ್ದು ವಿಜ್ಞಾನಕ್ಕೆ ಹಾನಿಯನ್ನು ತರುತ್ತಿದೆ, ಆದರೆ ಪ್ರಕಾಶನಗಳು ಭಾರಿ ಲಾಭವನ್ನು ಗಳಿಸುತ್ತಾರೆ.

ಹೆಚ್ಚಿನ  ವಿದ್ವಾಂಸ ವಿದ್ಯಾರ್ಥಿಗಳಿಗೆ ಉತ್ತಮ ಗುಣಮಟ್ಟದ ವೈಜ್ಞಾನಿಕ ಪತ್ರಿಕೆಗಳು ಸುಲಭವಾಗಿ ಲಭಿಸುವುದಿಲ್ಲವೆಂದು, ಕಝಕಸ್ತಾನಿನ  ಅಲೆಕ್ಸಾಂಡ್ರಾ ಎಲ್ಬಕ್ಯಾನ್  ಎಂಬ  ಯುವ ವಿಜ್ಞಾನಿಗಳೊಬ್ಬರು  ಸೈ-ಹಬ್ ಅನ್ನು ಪ್ರಾರಂಭಿಸಿದರು. ಇದರಿಂದಾಗಿ, ಅವರ ವಿರುದ್ಧ ಅಮೇರಿಕಾದಲ್ಲಿ ದಾಖಲಾಗಿರುವ ಮೊಕದ್ದಮೆಗಳ ಮೂಲಕ, ಆಕೆಯನ್ನು ಬಂಧಿಸಿ  ವಿಚಾರಣೆ ಮತ್ತು ಸುದೀರ್ಘ ಜೈಲು ಶಿಕ್ಷೆಯನ್ನು ಎದುರಿಸಲು ಸಾಗಿಸಬಹುದು. ದೆಹಲಿ ಹೈಕೋರ್ಟ್‌ನಲ್ಲಿ ದಾಖಲಾದ ಮೊಕದ್ದಮೆಯ ಸಂದರ್ಭದಲ್ಲಿ  ಆಕೆಯ ವಿಳಾಸವನ್ನು ಬಹಿರಂಗಪಡಿಸುವಂತೆ ಕೇಳಿ ಕೊಂಡಿರುವುದು ಆಕಸ್ಮಿಕವಲ್ಲ.  ಇದರಿಂದಾಗಿ, ಆಕೆಯನ್ನು ತಡೆಯಲು ಅಮೆರಿಕದ ಸಂಪೂರ್ಣ ಶಕ್ತಿ ಮತ್ತು ಅದರ ದೇಶಾತೀತ ವ್ಯಾಪ್ತಿಯನ್ನು ಬಳಸಲಾಗಬಹುದು.

ಅಮೇರಿಕಾದ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾನಿಲಯದಂತಹ ಉತ್ತಮ ಶಿಕ್ಷಣ ಸಂಸ್ಥೆಗಳು ಸಹ ಈ ಏಕಸ್ವಾಮ್ಯ ಪ್ರಕಾಶನಗಳು  ವಿಧಿಸುವ ಭಾರಿ ವೆಚ್ಚ ಕಷ್ಟಕರವಾಗಿದೆ ಎಂದು ಚಂದಾದಾರಿಕೆಗಳನ್ನು ಪಾವತಿಸಲು ನಿರಾಕರಿಸಿವೆ. ಗಮನಾರ್ಹ ಏನೆಂದರೆ, ಸೈ-ಹಬ್ ತಾಣವು  ಸುಮಾರು 80 ಮಿಲಿಯ ಪ್ರಕಟಣೆಗಳನ್ನೊಡಗೂಡಿರುವುದರಿಂದ, ಒಂದೇ ತಾಣದಿಂದ ಬಹಳ ಲೇಖನಗಳು ಡೌನ್‌ಲೋಡ್ ಮಾಡಲು ಸಿಗುವುವು. ಆದ್ದರಿಂದ  ಅಮೇರಿಕಾದಲ್ಲಿನ ವಿಜ್ಞಾನಿಗಳು ಹಾಗು ವಿದ್ಯಾರ್ಥಿಗಳು ಕೂಡ ಈ ಸೌಲಭ್ಯವನ್ನು ಉಪಯೋಗಿಸುತ್ತಾರೆ.

ಭಾರತೀಯ ಸಂಶೋಧಕರು ಸೈ-ಹಬ್ ಬಳಸಿ ಒಂದು ವರ್ಷದಲ್ಲಿ ಸುಮಾರು 7 ಮಿಲಿಯನ್ ಪತ್ರಿಕೆಗಳನ್ನು ಡೌನ್‌ಲೋಡ್ ಮಾಡಿದ್ದಾರೆ ಎಂದು 2016 ರಲ್ಲಿ ನಡೆದ ಒಂದು ವಿಶ್ಲೇಷಣೆಯು ತೋರಿಸಿದೆ. ಸೈ-ಹಬ್ ಇಲ್ಲದಿದ್ದರೆ, ಇದು ಭಾರತೀಯ ವಿಶ್ವವಿದ್ಯಾಲಯಗಳು ಮತ್ತು  ವಿದ್ಯಾರ್ಥಿಗಳಿಗೆ ಸುಮಾರು 200-250 ಮಿಲಿಯ ಡಾಲರ್ ಗಳಷ್ಟು ವೆಚ್ಚವಾಗಲಿದೆ. ಇದು ವಿದ್ಯಾರ್ಥಿಗಳಿಗೂ, ವಿಶ್ವವಿದ್ಯಾಲಯಗಳಿಗೂ ಅಸಾಧ್ಯದ ವೆಚ್ಚ.

ಮುಕ್ತ ಪ್ರವೇಶ (ಓಪನ್ ಆಕ್ಸೆಸ್) ಪತ್ರಿಕೆಗಳು ಜನರಿಗೆ ವಿಷಯವನ್ನು ಉಚಿತವಾಗಿ ಓದಲು ಮತ್ತು ಡೌನ್‌ಲೋಡ್ ಮಾಡಲು ಅನುಮತಿಸುತ್ತವೆ.  ಆದರೆ ಇಂತಹ ಪತ್ರಿಕೆಗಳಲ್ಲಿ ತಮ್ಮ ಲೇಖನಗಳನ್ನು ಪ್ರಕಟಿಸಲು ಲೇಖಕರು ಅಥವಾ ಅವರ ಸಂಸ್ಥೆಗಳು ಅಥವಾ ಸಂಶೋಧನೆಗೆ ಧನ-ಸಹಾಯ ನೀಡಿದ ಸಂಸ್ಥೆಗಳು ವೆಚ್ಚವನ್ನು ಪಾವತಿಸಬೇಕಾಗುತ್ತದೆ. ಬಡ ರಾಷ್ಟ್ರಗಳಲ್ಲಿನ ವಿಜ್ಞಾನಿಗಳಿಗೆ ಇದು ಕಷ್ಟವೇ. ಅಲ್ಲದೆ, ಇಂದು, ಜಗತ್ತಿನಾದ್ಯಂತ ಕೇವಲ  20% ಸಂಶೋಧನಾಫಲಗಳು ಇಂತಹ ಮುಕ್ತ ಪ್ರವೇಶ ಪತ್ರಿಕೆಗಳಲ್ಲಿ ಪ್ರಕಟಿಸಲಾಗುತ್ತವೆ.

ಮೇಲಿನ ಮೂರು ಪ್ರಕಾಶನಗಳಿಂದ ಇತರ ದೇಶಗಳಲ್ಲೂ ಇದೇ ರೀತಿಯ ಮೊಕದ್ದಮೆಗಳು ದಾಖಲಾಗಿವೆ. ಆದರೆ ಭಾರತದಲ್ಲಿ, ಇದು ಬರೇ ಪ್ರಕಾಶನಗಳ ಮತ್ತು ಸೈ-ಹಬ್/ಲಿಬ್-ಜೆನ್ ಇವುಗಳ ನಡುವಿನ ಪ್ರಕರಣವಲ್ಲ. ನ್ಯಾಯಾಲಯವು ಈ ಪ್ರಕಾಶನಗಳ  ಬೇಡಿಕೆಯನ್ನು ಆಲಿಸಿ  ಅವು ಕೇಳಿದಂತೆ ಸೈ-ಹಬ್/ಲಿಬ್-ಜೆನ್ ತಾಣಗಳ ಪ್ರವೇಶಕ್ಕೆ ಭಾರತದಲ್ಲಿ ಸಮಗ್ರ ನಿಷೇಧ ತಂದರೆ,  ಭಾರತದ ವಿದ್ಯಾರ್ಥಿಗಳು, ಶಿಕ್ಷಕರು, ಸಂಶೋಧನಾ ವಿದ್ವಾಂಸರು ಮತ್ತು ವಿಜ್ಞಾನಿಗಳ ಅತ್ಯಂತ ದೊಡ್ಡ ಸಮುದಾಯಕ್ಕೆ ವೈಜ್ಞಾನಿಕ ಲೇಖನಗಳ ಮತ್ತು ಪುಸ್ತಕಗಳ ಲಭ್ಯತೆಯನ್ನು ಕೊನೆಗೊಳಿಸಿದಂತಾಗುವುದು.  ಇದರಿಂದಾಗಿ ಭಾರತದಲ್ಲಿ ವಿಜ್ಞಾನ ಮತ್ತು ಶಿಕ್ಷಣಕ್ಕೆ ಗಂಭೀರ ದೀರ್ಘಕಾಲೀನ ಪರಿಣಾಮಗಳು ಉಂಟಾಗಲಿವೆ.
ಸೈ-ಹಬ್ ನ ಚಟುವಟಿಕೆಗಳು ಭಾರತದ ಕಾನೂನಿನಡಿಯಲ್ಲಿ ಸಮರ್ಥನೀಯವಲ್ಲ ಎಂಬ ನಂಬಿಕೆ ಇದೆ. ಇದು ನಿಜವಲ್ಲ. ಮೊದಲನೆಯದಾಗಿ ಸೈ-ಹಬ್ ಒಂದು ಉಚಿತ ಸೇವೆ. ಅದು ವಿದ್ಯಾರ್ಥಿಗಳಿಂದಾಗಲೀ ಸಂಶೋಧಕರಿಂದಾಗಲೀ ಡೌನ್‌ಲೋಡ್‌ಗಳಿಗೆ ಶುಲ್ಕ ವಿಧಿಸುವುದಿಲ್ಲ. ಆದ್ದರಿಂದ ಲೇಖನ ಪ್ರಕಟಣೆಗಳನ್ನು ಒದಗಿಸುವ ಸೈ-ಹಬ್ ನ ಸೇವೆ

ಲಾಭೋದ್ದೇಶವುಳ್ಳದ್ದಲ್ಲ. ಎರಡನೆಯದಾಗಿ, ಭಾರತೀಯ ಕೃತಿಸ್ವಾಮ್ಯ ಕಾನೂನಿನ ಅಡಿಯಲ್ಲಿ ಶಿಕ್ಷಣ ಮತ್ತು ಸಂಶೋಧನೆಗೆ ವಿನಾಯಿತಿಗಳಿವೆ. ದೆಹಲಿ ವಿಶ್ವವಿದ್ಯಾಲಯದ ಫೋಟೋಕಾಪಿ ಪ್ರಕರಣದಲ್ಲಿ ಈ ವಿನಾಯಿತಿಯು ಅನ್ವಯಿಸುವುದೆಂದು ನ್ಯಾಯಾಲಯವು ತೀರ್ಮಾನಿಸಿತ್ತು. ಅದೇ ರೀತಿ, ಭಾರತದಲ್ಲಿನ ಸಂಶೋಧಕರು ಸೈ-ಹಬ್ ಅನ್ನು ಉಪಯೋಗಿಸುವುದಕ್ಕೆ ಈ ವಿನಾಯಿತಿಯು ಅನ್ವಯಿಸುವುದೇ ಎಂದು ನ್ಯಾಯಾಲವು ತೀರ್ಮಾನಿಸಬೇಕು. ಮೂರನೆಯದಾಗಿ, ಈ ವೆಬ್‌ಸೈಟ್‌ಗಳನ್ನು ಭಾರತದೆಲ್ಲೆಡೆ ನಿರ್ಬಂಧಿಸುವುದರಿಂದ, ಇತರ ಹಲವಾರು ಪ್ರಕಾಶನಗಳ ಪ್ರಕಟಣೆಗಳಿಗೆ  ಹಾಗೂ ಮುಕ್ತ ಪ್ರವೇಶ (ಓಪನ್ ಅಕ್ಸೆಸ್) ಪ್ರಕಟಣೆಗಳಿಗೆ ಕೂಡ ನಿಷೇಧವು ಅನ್ವಯಿಸುವುದು. ಕೊನೆಯದಾಗಿ, ಭಾರತದ ಕೃತಿಸ್ವಾಮ್ಯ ಕಾನೂನುನಿನ ಪ್ರಕಾರ, 60 ವರ್ಷಗಳಿಗಿಂತ ಹಳೆಯದಾದ ಪ್ರಕಟಣೆಗಳು ಮುಕ್ತವಾಗಿ ದೊರಕಬೇಕು. ಹೀಗಿದ್ದರೂ ಕೂಡ, ಈ ಮೇಲಿನ ಪ್ರಕಾಶನಗಳು ಇಂತಹ ಹಳೆಯ ಪ್ರಕಟಣೆಗಳನ್ನು ಉಚಿತವಾಗಿ ಒದಗಿಸದೆ, ಭಾರತೀಯ ಸಮುದಾಯದ ಮೇಲೆ ಇವಕ್ಕೂ ಕೂಡ ಶುಲ್ಕ ವಿಧಿಸುತ್ತಾ ಇದ್ದಾರೆ.

ದೆಹಲಿಯ ಉಚ್ಚ ನ್ಯಾಯಾಲಯದಲ್ಲಿ ಸೈ-ಹಬ್/ಲಿಬ್-ಜೆನ್ ತಾಣಗಳ ಪ್ರವೇಶಕ್ಕೆ ಭಾರತದಲ್ಲಿ ಸಂಪೂರ್ಣ ಕ್ರಿಯಾತ್ಮಕ ನಿಷೇಧ ಕೋರಿ ದಾಖಲಾಗಿರುವ ಮೊಕದ್ದಮೆ ಸೈ-ಹಬ್ ಮತ್ತು ಲಿಬ್ಜೆನ್ ವಿರುದ್ಧವಲ್ಲ; ಇದು ಈ ದೇಶದ ಶಿಕ್ಷಣ ಮತ್ತು ಸಂಶೋಧನಾ ಸಮುದಾಯದ ವಿರುದ್ಧವಾಗಿದೆ. ಪ್ರಕಾಶನ ಉದ್ಯಮದ ದರೋಡೆಕೋರರ ಈ ಪ್ರಕರಣವು ಯಶಸ್ವಿಯಾದರೆ ಈ ಸಮುದಾಯದ ಸಂಶೋಧನಾ ಚಟುವಟಿಕೆಗಳು ಸ್ಥಗಿತಗೊಳ್ಳುತ್ತವೆ. ಆದ್ದರಿಂದ ಈ ಪ್ರಕರಣದಿಂದಾಗಿ ಭಾರತದ ಶಿಕ್ಷಣ ಮತ್ತು ಸಂಶೋಧಕ ಸಮುದಾಯದ ಭವಿಷ್ಯ ಅಪಾಯದಲ್ಲಿದೆ ವಿನಃ, ಅಲೆಕ್ಸಾಂಡ್ರಾ ಎಲ್ಬಕ್ಯಾನ್ ಅಥವಾ ಸೈ-ಹಬ್ ನ ಭವಿಷ್ಯವಲ್ಲ.

ಎಲ್ಲಾ ಜ್ಞಾನವು ಸಾರ್ವಜನಿಕರಿಗೆ ಮುಕ್ತವಾಗಿ ದೊರಕಬೇಕು ವಿನಃ, ಏಕಸ್ವಾಮ್ಯತೆಯ ಅಡಿಯಲ್ಲಿ ಸಿಲುಕಿರಬಾರದು ಎಂದು ಅಖಿಲ ಭಾರತ ಜನ ವಿಜ್ಞಾನ ಸಂಘಟನೆಗಳ ಜಾಲವು (AIPSN) ಒತ್ತಾಯಿಸುತ್ತದೆ.

ಇಂಗ್ಲೆಂಡಿನ ದಂತಕಥೆಯಲ್ಲಿನ ರಾಬಿನ್ ಹುಡ್ ನಂತೆ, ಸೈ-ಹಬ್/ಲಿಬ್-ಜೆನ್ ತಾಣಗಳು ಜ್ಞಾನವನ್ನು ಸಾರ್ವಜನಿಕರಿಗೆ ಉಚಿತವಾಗಿ ಒದಗಿಸಿರುವುದರಿಂದ ಸಾರ್ವಜನಿಕರಿಗೆ ತಮ್ಮ ಹಕ್ಕು ಲಭಿಸುತ್ತಿದೆ. ಸೈ-ಹಬ್/ಲಿಬ್-ಜೆನ್ ಗಳ ವಿರುದ್ಧ ಹೂಡಿರುವ ಮೊಕದ್ದಮೆಯಲ್ಲಿ  ಏಕಸ್ವಾಮ್ಯ ಪ್ರಕಾಶನ ಔದ್ಯಮಿಗಳನ್ನು ನ್ಯಾಯಾಲಯದಲ್ಲಿ ಎದುರಿಸುತ್ತಿರುವವರೊಂದಿಗೆ ಬೆಂಬಲವಾಗಿ AIPSN ಕೈಜೋಡಿಸುತ್ತದೆ. (ಕನ್ನಡಕ್ಕೆ ಅನುವಾದ: ಪ್ರಜ್ವಲ್ ಶಾಸ್ತ್ರಿ & ವಾಣಿ ಚಟ್ಟರ್ಜಿ)

ಸಂಪರ್ಕ:

ಪಿ ರಾಜಮಾಣಿಕಂ, ಪ್ರಧಾನ ಕಾರ್ಯದರ್ಶಿ,
ಅಖಿಲ ಭಾರತ ಜನ ವಿಜ್ಞಾನ ಸಂಘಟನೆಗಳ ಜಾಲ (AIPSN)
gsaipsn@gmail.com, 9442915101  Twitter: @gsaipsn